ನಾಡಿನ ಜನತೆ ಒಪ್ಪುವುದಕ್ಕೆ ಸಿದ್ದವಿಲ್ಲ. ಆ ಒಂದು ಪ್ರತಿಭಟನೆ ರಾಜ್ಯಾದ್ಯಾಂತಹ ಇರುವಂತಹ ಈ ಕಾಲದಲ್ಲಿ ನಾವು ಇಲ್ಲಿ ಯಾವುದೇ ಕಾರಣಕ್ಕೆ ಸಹಕರಿಸಿದರೆ, ರಾಜ್ಯದ ಜನತೆಯ ತೀರ್ಪಿಗೆ ವಿರುದ್ಧವಾಗಿ ನಾವು ಏನಾದರೂ ಕೆಲಸ ಮಾಡಿದಂತಾಗುತ್ತದೆ, ಜನ ಆಯ್ಕೆ ಮಾಡಿ ನಮ್ಮನ್ನು ಕಳುಹಿಸಿರುವುದು ಅವರ ಅನಿಸಿಕೆಗಳನ್ನು ಇಲ್ಲಿ ಹೇಳುವುದಕ್ಕೆ ಅವರ ಪ್ರಾಮಾಣಿಕ ಅನಿಸಿಕೆಗಳನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಬಂದಿರುವಂತಹ ಪ್ರತಿನಿಧಿಗಳು ನಾವು ಹೀಗಾಗಿ ನಾವು ಇವತ್ತು ಅನಿವಾರ್ಯವಾಗಿ ಸದನದ ಬಾವಿಗೆ ಹೋಗಬೇಕಾಗುತ್ತದೆ. ಇದನ್ನು ಬಿಟ್ಟು ನಮಗೆ ಬೇರೆ ದಾರಿನೇ ಕಾಣುತ್ತಿಲ್ಲ.

(ಶ್ರೀ ಯಡಿಯೂರಪ್ಪನವರು ಧರಣಿಯಲ್ಲಿ ಭಾಗವಹಿಸುವುದಕ್ಕೆ ಮತ್ತೆ ಸದನದ ಬಾವಿಗೆ ಬಂದರು)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಇದು ನಮ್ಮ ನಿರ್ಧಾರವಲ್ಲ, ಇಲ್ಲಿ ನೋಡಿ 27ನೇ ಜುಲೈ 1992 ತಮಿಳುನಾಡಿನ ಅಮಿಷಗಳಿಗೆ ಮಣಿದ ನ್ಯಾಯ ಮಂಡಳಿಯ ಬಹಿಷ್ಕಾರಕ್ಕೆ ಒತ್ತಾಯಿಸಲು ಮಾನ್ಯ ಶ್ರೀ ದೇವೇಗೌಡರ ಹೇಳಿಕೆ ಇದು ನಮ್ಮಗಳ ಹೇಳಿಕೆಯಲ್ಲ. ಇದು ಮುಖ್ಯಮಂತ್ರಿಗಳೇ ಹೇಳಿರತಕ್ಕಂಥದ್ದು ಬಹಿಷ್ಕರಿಸಬೇಕೆಂದು ಹೇಳಿ. ಈಗ ಶ್ರೀ ಯಡಿಯೂರಪ್ಪನವರು ಬಹಿಷ್ಕರಿಸುವುದಿಲ್ಲವೆಂದು ಹೇಳಿದರು, ಅದು ಇರಲಿ. ಒಟ್ಟಾರೆ ಅಭಿಪ್ರಾಯಕ್ಕೆ ನನ್ನ ಬೆಂಬಲವಿದೆ. ನಾನು ಧರಣಿಯಿಂದ ಹಿಂದಕ್ಕೆ ಹೋಗುವುದಕ್ಕೆ ತಯಾರಿಲ್ಲ. ಆದರೆ ನ್ಯಾಯ ಮಂಡಳಿಯನ್ನು ಬಹಿಷ್ಕರಿಸಬೇಕೆಂದು ನನ್ನ ತೀರ್ಮಾನ ಅದನ್ನು ವಿರೋಧಿಸಿ ಸಭಾತ್ಯಾಗ ಮಾಡಿ ಈ ಧರಣಿಗೆ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ.

+ ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು) :- ಸನ್ಮಾನ್ಯ ಅಧ್ಯಕ್ಷರೇ, ಧರಣಿ ಮಾಡುವ ಹಕ್ಕನ್ನು ನಾನು ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಅವರ ಇಷ್ಟ. ಒಂದು ವಾಸ್ತವ ಸ್ಥಿತಿಯನ್ನು ಜನಗಳ ಮುಂದೆ ಇಡಬೇಕಾದುದು ನನ್ನ ಜವಾಬ್ದಾರಿ. ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ದೇಶದ ಜನತೆ, ರಾಜ್ಯದ ಜನತೆಯ ಬಗ್ಗೆ

(ಗೊಂದಲ)

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗವನ್ನು ಮಾಡಿದರು ಅವರ ಜೊತೆಯಲ್ಲಿಯೇ ರೈತ ಸಂಘದ ಶ್ರೀ ಪುಟ್ಟಣ್ಣಯ್ಯನವರು ಸಹ ಸಭಾತ್ಯಾಗವನ್ನು ಮಾಡಿದರು.)

ಶ್ರೀ ಹೆಚ್.ಡಿ.ದೇವೇಗೌಡ:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಯಡಿಯೂರಪ್ಪನವರು ಇದರ ವಿರುದ್ಧ ಇಡೀ ರಾಜ್ಯದ ಜನತೆ ಸಿಡಿದೆದ್ದಿದ್ದಾರೆಂದು ಹೇಳಿದ್ದಾರೆ. ಜನತೆಯ ಮುಂದೆ ಅವರೂ ಹೋಗುತ್ತಾರೆ, ನಾವೂ ಸಹ ಹೋಗುತ್ತೇವೆ. ಜನತೆಯ ಮುಂದೆ ಹೋಗುವಂತಹ ಸರ್ವಾಧಿಕಾರ ನನ್ನ ಒಬ್ಬನಿಗೆ ಇಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಂತಿಮ ತೀರ್ಪು ಕೊಡತಕ್ಕಂಥದ್ದು ಮಹಾ ಜನತೆ. ನಮ್ಮ ಎಲ್ಲಾ ಆ ಕಡೆ ಇರತಕ್ಕಂತಹ ಮುಖಂಡರು ಜನತೆ ಮುಂದೆ ಹೋಗಿದ್ದಾರೆ, ಹೋಗುತ್ತಿದ್ದಾರೆ. ನಾವು ಇನ್ನೂ ಹೋಗಿಲ್ಲ. ನಾನು ಈ ಸದನದಲ್ಲಿ ಹೇಳುತ್ತೇನೆ. ನಾವು ಹೋಗುವುದಕ್ಕೆ ಸಿದ್ಧರಿದ್ದೇವೆ. ಅದು ಪ್ರತ್ಯೇಕ. ನಾನು ಹೋಗುವುದನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ಅವರು ಹೋಗುವುದು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ತೀರ್ಪು ಕೊಡುವ ಶಕ್ತಿ ಮಹಾ ಜನತೆಗೆ ಇದೆ ಎನ್ನುವುದನ್ನು ನಾವು ನೀವು ಅವರು ಎಲ್ಲಾ ತಿಳಿದುಕೊಂಡಿದ್ದೇವೆ. ಇದರಲ್ಲಿ ಏನೂ ಹೊಸ ವಿಷಯವಿಲ್ಲ. ನಾನು ಅದರ ಬಗ್ಗೆ ಹೊಸದಾಗಿ ವ್ಯಾಖ್ಯಾನ ಮಾಡತಕ್ಕಂತಹ ಅವಶ್ಯಕತೆ ಇಲ್ಲ. ಆದರೆ